ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಪರಿವರ್ತಿಸಲಾಗಿದೆ. ಸಧ್ಯ ಆಲ್ಲಿ ಒಬ್ಬ ವೈದ್ಯರು ೩ ಮಂಹಿಳಾ ಆರೋಗ್ಯ ಸಹಾಯಕಿಯರು, ಒಬ್ಬ ಪುರುಷ ಆರೋಗ್ಯ ಸಹಾಯಕ ಮತ್ತು ಇಬ್ಬರು ಜವಾನರು ಕೆಲಸ ಮಾಡುತ್ತಿದ್ದಾರೆ. ನೇಸರ್ಗಿ ಗ್ರಾಮದ ಜನರು ಈ ಆಸ್ಪತ್ರೆಯ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದಲ್ಲದೆ ನೇಸರ್ಗಿ ೧೦ ಕಿಲೋ ಮೀಟರ್ ದೂರದ ನಾಗನೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ. ಆ ಕೇಂದ್ರದಲ್ಲಿ ೩ ವೈದ್ಯಾಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಒಬ್ಬರನ್ನು ದಿನ ಬಿಟ್ಟು ದಿನ ನೇಸರ್ಗಿಗೆ ಭೇಟಿ ನೀಡಿ ಚಿಕಿತ್ಸೆ ನೀಡಲು ಆದೇಶಿಸಿದೆ.

೧೬) ರಾಜ್ಯದಲ್ಲಿರುವ ವಿದ್ಯಾ ಸಂಸ್ಥೆಗಳು ಹಾಗೂ ವಾಣಿಜ್ಯ ವಿದ್ಯಾ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿಯನ್ನು ತಪ್ಪಿಸುವುದು.

SRI R. VENKATARAMIAH.—Sir, in Karnataka mainly in Bangalore the private management of schools are collecting exhorbitant donations, school fees, building fees, etc and several other fees by making use of the fact that there is rush for admission. Parents are put to untold hardship. The Government has let the private managements to extract money from the parents which needs a check. This is also the case in Commerce teaching Institutions. I call upon the Minister for Education Primary and Secondary to make a statement and to curb this menace.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಸೀಟ್ಸ್ ನಿಯಂತ್ರಣ ಮಾಡತಕ್ಕಂಥ ಕಾಯಿದೆಗೆ ಖಾಸಗಿಯವರು ಉಚ್ಚನ್ಯಾಯಾಲಯದಲ್ಲಿ ತಡೆ ಆಜ್ಞೆ ತಂದಿದ್ದಾರೆ. ಮತ್ತೆ ಬೇರೆ ಬೇರೆ ವಿಷಯಗಳಿಗೂ ತಡೆ ತಂದಿದ್ದಾರೆ. ಈಗಾಗಲೇ ಈ ಬಿಲ್ ಕೇಂದ್ರ ಸರ್ಕಾರದಲ್ಲಿ ಬಾಕಿ ಇದೆ. ನಾನು ಅದನ್ನು ತೀವ್ರವಾಗಿ ಕ್ಲಿಯರ್ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ. ಅದು ಬಂದ ಮೇಲೆ ನಿಯಂತ್ರಣ ಮಾಡಲಾಗುವುದು ಎಂದು ಹೇಳುತ್ತೇನೆ.

೧೭) ಉಳ್ಳಾಲ ಪೋಲೀಸ್ ಠಾಣೆಗೆ ಹೆಚ್ಚು ಪೋಲೀಸ್ ಪೇದೆಗಳನ್ನು ನೇಮಿಸುವುದು

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಸುಮಾರು ಹದಿನೈದು ಗ್ರಾಮಗಳಿಗೆ ಒಂದು ಲಕ್ಷ ಜನರಿಗೆ ಒಳಪಟ್ಟಿರುವ ಪೋಲೀಸ್ ಸ್ಟೇಷನ್ ಉಳ್ಳಾಲದಲ್ಲಿದೆ. ಅಲ್ಲಿರುವ ಪೋಲೀಸರು ಬರೀ ಒಂಭತ್ತು, ಇಷ್ಟು ವಿಸ್ತಾರವಾದ ಜಾಗಕ್ಕೆ ಇಷ್ಟು ಹೆಚ್ಚಿನ ಜನಸಂಖ್ಯೆಗೆ ೯ ಜನ ಪೋಲೀಸರು ಏನು ಮಾಡಿಯಾರು ? ಈ ಕಾರಿತು ಎರಡು ವರ್ಷಗಳ ಹಿಂದೆ ಉಳ್ಳಾಲಕ್ಕೆ ಭೇಟಿಕೊಟ್ಟ ಮುಖ್ಯ-ಮಂತ್ರಿಗಳಲ್ಲಿ ಹೇಳಿಕೊಂಡಾಗ ಕೂಡಲೇ ಇನ್ನೂ ಹೆಚ್ಚಿಗೆ ೧೫ ಜನ ಪೋಲೀಸರನ್ನು ಕೊಡಲಾಗುವುದೆಂದು ತಿಳಿಸಿದ್ದರು, ಹಿಂದಿನ ಗೃಹ ಸಚಿವರುಗಳಾದ ಮಾನ್ಯ ಶ್ರೀ ಬಿ. ರಾಚಯ್ಯ ಮತ್ತು ಮಾನ್ಯ ಶ್ರೀ ಜಾಲಪ್ಪನವರಲ್ಲಿ ಕೇಳಿಕೊಂಡಾಗ ಕೂಡಲೇ ಹೆಚ್ಚಿನ ಪೋಲೀಸರನ್ನು ನೇಮಕ ಮಾಡಲಾಗುವುದೆಂದು ಭರವಸೆ ನೀಡುತ್ತಾ ಬಂದಿರುತ್ತಾರೆ. ಆದರೆ ಈವರೆವಿಗೂ ಹೆಚ್ಚಿನ ಪೋಲೀಸರ ನೇಮಕವಾಗಿಲ್ಲ, ತುಂಬಾ ಕಕ್ಷೆದಾರರುಗಳು ಗಲಾಟೆಗಳು ಇನ್ನಿತರ ತೊಂದರೆಗಳಿರುವ ಈ ಪ್ರದೇಶಕ್ಕೆ ೯ ಜನ ಪೋಲೀಸರು ಏನೇನೂ ಸಾಲದು. ಆದಕಾರಣ ೧೫ ಜನ ಹೆಚ್ಚಿಗೆ ಪೋಲೀಸರನ್ನು ಉಳ್ಳಾಲ ಪೋಲೀಸ್ ಸ್ಟೇಷನ್ನಿಗೆ ನೇಮಕ ಮಾಡುವಂತಾಗಬೇಕು. ಈ ಕಾರಿತು ಗೃಹ ಸಚಿವರ ಗಮನಪತ್ರವನ್ನು ಸೆಳೆಯುತ್ತೇನೆ.

ಶ್ರೀ ವೀರಣ್ಣ.—ಸವಂಗ್ರ ಪೋಲೀಸ್ ಇಲಾಖೆಯ ಆಧುನಿಕರಣದ ಬಗ್ಗೆ ಸರ್ಕಾರ ಪರಿಗಣಿಸುತ್ತದೆ. ಅದರಂತೆ ರಾಜ್ಯದಲ್ಲಿ ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸಲು ಮತ್ತು ಸಿಬ್ಬಂದಿಯನ್ನು